# ಶ್ರೀದೇವಿಯ ಮಗಳೆಲ್ಲಿ?



ಒಂದು ಕಾಲದಲ್ಲಿ ಬಾಲಿವುಡ್ ನಲ್ಲಿ ರಾಣಿಯಂತೆ ಮೆರೆದಾಕೆ ಶ್ರೀದೇವಿ. ಈಗ ಶ್ರೀದೇವಿಯ ಮಗಳು ಜಾಹ್ನವಿ ಚಿತ್ರರಂಗ ಪ್ರವೇಶಿಸುತ್ತಿದ್ದಾಳೆ. ಕರಣ್ ಜೋಹರ್ ನಿರ್ದೇಶನದ ಹೊಸ ಚಿತ್ರದಲ್ಲಿ ಜಾಹ್ನವಿಯೇ ನಾಯಕಿ ಎಂದು ಆಕೆಯ ಅಪ್ಪ ನಿರ್ಮಾಪಕ ಬೋನಿಕಪೂರ್ ಖಚಿತ ಪಡಿಸಿದ್ದಾರೆ. ಆದರೆ ಚಿತ್ರದ ಶೂಟಿಂಗ್ ಎಲ್ಲಿಯವರೆಗೆ ಬಂದಿದೆ ಎನ್ನುವುದರ ಸುದ್ದಿಯೇ ಇಲ್ಲ. ಇನ್ನೂ ಶುರುವೇ ಆಗಿಲ್ಲ ಎನ್ನುವುದು ಶ್ರೀದೇವಿಗೆ ಆಗದವರ ಉವಾಚ.

ಒಂದು ಮೂಲದ ಪ್ರಕಾರ, ಮರಾಠಿಯಲ್ಲಿ ಅತ್ಯಧಿಕ ಆದಾಯ ಗಳಿಸಿ ದಾಖಲೆ ಮಾಡಿದ 'ಸೈರಾಟ್' ಚಿತ್ರದ ಹಿಂದಿ ಅವತರಣಿಕೆಯನ್ನು ಕರಣ್ ಜೋಹರ್ ಕೈಗೆತ್ತಿಕೊಂಡಿದ್ದು ಅದರಲ್ಲಿ ಜಾಹ್ನವಿ ನಾಯಕಿಯಂತೆ. ಈ ಹಿಂದೆ 'ಸ್ಟೂಡೆಂಟ್ ಆಫ್ ದಿ ಇಯರ್ 2' ಚಿತ್ರದಲ್ಲಿ ಜಾಹ್ನವಿಯೇ ನಾಯಕಿ ಎಂದು ಸುದ್ದಿ ಹಬ್ಬಿತ್ತು. ಇದೀಗ 'ಗಜನಿ' ಚಿತ್ರ ನಿರ್ದೇಶಕ ಮುರುಗಾದಾಸ್ ಅವರೂ ಜಾಹ್ನವಿಯನ್ನು ತನ್ನ ಹೊಸ ಚಿತ್ರದ ಪಾತ್ರಕ್ಕೆ ಕೇಳಿದ್ದಾರೆಂದು ಸುದ್ದಿ ಹಬ್ಬಿದೆ. ಸತ್ಯ ಯಾವುದೆಂದು ಶ್ರೀದೇವಿಯೇ ಹೇಳಬೇಕು.

# ಕಂಗನಾ ಗಾಯದ ಕಥೆ



ಬಾಲಿವುಡ್‌ನಲ್ಲಿ ತನ್ನದೇ ಆದ ಛಾತಿಯನ್ನು ಬೆಳೆಸಿಕೊಂಡಿರುವ ನಟಿ ಕಂಗನಾ. ಅವಕಾಶಗಳು ಸಣ್ಣದೇ ಇರಲಿ, ದೊಡ್ಡದೇ ಇರಲಿ; ತನ್ನ ಅಭಿನಯ ಪ್ರತಿಭೆ ಮತ್ತು ಫ್ಯಾಶನ್ ಪ್ರಜ್ಞೆಯಿಂದ ಆ ಅವಕಾಶಗಳನ್ನು ಯಶಸ್ವಿಯಾಗಿ ಹೇಗೆ ಬಳಸಿಕೊಳ್ಳಬೇಕು ಎನ್ನುವುದು ಆಕೆಗೆ ಚೆನ್ನಾಗಿ ಗೊತ್ತಿದೆ. ಬಾಲಿವುಡ್‌ನ ಬಹಳಷ್ಟು ನಿರ್ದೇಶಕರು ಈಕೆಯನ್ನು ಜಗಳಗಂಟಿ ಎಂದು ಹಿಂದಿನಿಂದ ಕರೆಯುವುದಿದೆ. ಹಿಂದಿನಿಂದ ಏಕೆಂದರೆ, ಈಕೆಯ ಎದುರಿಗೇ ಅದನ್ನು ಹೇಳುವ ಧೈರ್ಯ ಅವರಿಗಿಲ್ಲ. ಅಪಮಾನ ಮತ್ತು ವೃತ್ತಿಮಾತ್ಸರ್ಯವನ್ನು ಎದುರಿಸಿಯೇ ಇವತ್ತು ಬಾಲಿವುಡ್‌ನ ಅತ್ಯುತ್ತಮ ನಟಿ ಎಂಬ ಬಿರುದು ಪಡೆಯುವಷ್ಟು ತಾಕತ್ತು ಪ್ರದರ್ಶಿಸಿದವಳು ಕಂಗನಾ,

'ಮಣಿಕರ್ಣಿಕಾ– ದಿ ಕ್ವೀನ್ ಆಫ್ ಝಾನ್ಸಿ' ಚಿತ್ರದಲ್ಲಿ ಲಕ್ಷ್ಮೀಬಾಯಿಯ ಪಾತ್ರ ನಿರ್ವಹಿಸುತ್ತಿರುವ ಕಂಗನಾಗೆ ಈ ಹೊಸ ಪಾತ್ರದ ಬಗ್ಗೆ ತುಂಬು ಭರವಸೆ ಇದೆ. ಮೂವರು ಸಹನಟರ ಎದುರು ಕತ್ತಿವರಸೆ ಮಾಡುವ ದೃಶ್ಯವೊಂದರಲ್ಲಿ ಆಕೆಯ ಹಣೆಗೆ ಗಾಯವಾಗಿ ನೆತ್ತರು ಮುಖಕ್ಕೆ ಚಿಮ್ಮಿದರೂ ಕಂಗನಾ ಹಿಂಜರಿಯಲಿಲ್ಲವಂತೆ! ಕಂಗನಾ ಧೈರ್ಯದ ಬಗ್ಗೆ ಚಿತ್ರದ ತಾಂತ್ರಿಕ ವರ್ಗದವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಗಾಯಕ್ಕೆ 10 ಹೊಲಿಗೆಗಳನ್ನು ಹಾಕಿದರೂ ಕಂಗನಾ ಬೇಜಾರು ಮಾಡಿಕೊಂಡಿಲ್ಲ ಎನ್ನುವುದು ನಿರ್ದೇಶಕರ ಖುಷಿ!

ಪತ್ರಕರ್ತರು ಈ ಬಗ್ಗೆ ಕೇಳಿದಾಗ, 'ಝಾನ್ಸಿರಾಣಿ ಲಕ್ಷ್ಮೀಬಾಯಿ ಧೀರ ಯೋಧೆ, ಸೇನಾ ದಂಡನಾಯಕಿ ಆಗಿದ್ದವಳು. ಯೌವನದಲ್ಲೇ ಎಷ್ಟೊಂದು ಯುದ್ಧಗಳಲ್ಲಿ ಪಾಲ್ಗೊಂಡಿದ್ದಾಳೆ! ಅಂತಹ ಧೀರ ರಾಣಿಯ ಪಾತ್ರ ಮಾಡುವಾಗ ನನಗಾದದ್ದು ಚಿಕ್ಕದೊಂದು ಗಾಯ. ಒಂದೂ ಗಾಯವಿಲ್ಲದೆ ಅಂತಹ ಧೀರ ಮಹಿಳೆಯ ಪಾತ್ರ ನಿರ್ವಹಿಸುವುದಾದರೂ ಹೇಗೆ?' ಎಂದು ಪತ್ರಕರ್ತರಿಗೆ ಕಂಗನಾ ಮರುಪ್ರಶ್ನೆ ಹಾಕಿದ್ದಾಳೆ.

'ಹೋಗಲಿ, ನಿಮ್ಮ ಹೃದಯದ ಗಾಯದ ಬಗ್ಗೆ ಹೇಳಿ?' ಎಂದು ಇನ್ನೊಬ್ಬ ಪತ್ರಕರ್ತ ಕೊಂಕು ನುಡಿದಾಗ, ಕಂಗನಾ ವೇದಾಂತಿಯಂತೆ, 'ಅವೆಲ್ಲವೂ ಯುದ್ಧದಲ್ಲಿ ಗೆದ್ದ ಪದಕಗಳಂತೆ. ಎಲ್ಲರ ಆತ್ಮದಲ್ಲೂ ಗಾಯಗಳಿವೆ. ಈ ಗಾಯಗಳನ್ನು ಮಾಗಿಸುವ ಅಗತ್ಯವಿಲ್ಲ' ಎಂದು ನಕ್ಕಳಂತೆ!

ಅಭಿನಯದ ಅತ್ಯುತ್ತಮ ಅವಕಾಶಗಳು ಕಂಗನಾಳನ್ನು ಈ ವರ್ಷವೂ ಅರಸಿಕೊಂಡು ಬಂದಿವೆ. 'ರಜ್ಜೋ' ಚಿತ್ರದಲ್ಲಿ ಮುಸ್ಲಿಂ ನೃತ್ಯಗಾತಿಯ ಪಾತ್ರ. ಬ್ರಾಹ್ಮಣ ಯುವಕನೊಬ್ಬ ಆಕೆಯನ್ನು ಮೋಹಿಸುವ ಕಥೆ. ಈ ಚಿತ್ರದಲ್ಲಿ ಆದಿವಾಸಿ ಹಿನ್ನೆಲೆ ಇರುವುದರಿಂದ 200 ರೂಪಾಯಿಯ ಸಾಮಾನ್ಯ ಸೀರೆ ಉಟ್ಟುಕೊಂಡು ನಟಿಸಿದ್ದು ದೊಡ್ಡ ಸುದ್ದಿ. 'ಸಿಮ್ರಾನ್' ಮತ್ತು 'ಡಿವೈನ್ ಲವರ್' ಎಂಬ ಚಿತ್ರಗಳಿಗೂ ಸಹಿ ಹಾಕಿರುವ ಕಂಗನಾ 2018ರಲ್ಲೂ ಬ್ಯುಸಿ ಎನ್ನುತ್ತಿದ್ದಾಳೆ.

■ ಬಿಂದು